

# ಎಚ್ಚರ

ಮೊದಲಿಗೆ ಆ ಊರಿನಲ್ಲಿ ಇಬ್ಬರು ನಾಯಕರಿದ್ದರು. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಮಹಾಜನತೆ ಇಬ್ಬರಲ್ಲೊಬ್ಬರನ್ನು ಆಯ್ಕೆ ಮಾಡಬೇಕಿತ್ತು. ಒಬ್ಬ ಜಾದೂಗಾರ. ಮತ್ತೊಬ್ಬ ಮಾಂತ್ರಿಕ.

ಚುನಾವಣೆಗೆ ಮುನ್ನ ಜಾದೂಗಾರ ತಾನೇನೆಲ್ಲಾ ಮಾಡಬಹುದೆಂದು ತೋರಿಸುತ್ತಿದ್ದ. ಕಲ್ಲಿಂದ ನೀರು ತರಿಸುತ್ತಿದ್ದ. ಗಾಳಿಯಿಂದ ರೂಪಾಯಿ ನೋಟುಗಳನ್ನು ಸೃಷ್ಟಿಸುತ್ತಿದ್ದ. ಟೋಪಿಯಿಂದ ದನಗಳನ್ನು ಹೊರತೆಗೆಯುತ್ತಿದ್ದ. ಸೂಜಿಯ ಕಣ್ಣಿನಲ್ಲಿ ಆನೆಯನ್ನು ತೂರಿಸಿ ಅದರ ಬಾಲಕ್ಕೆ ಗಂಟು ಹಾಕುತ್ತಿದ್ದ. ಒಂದು ರೀತಿಯಲ್ಲಿ ಪ್ರತಿ ಬಾರಿಯೂ ಇದು ನಿರೀಕ್ಷಿತ ಪದ್ಧತಿಯಲ್ಲಿಯೇ ನಡೆಯುತ್ತಿತ್ತು. ಚುನಾವಣೆಗೆ ಮುನ್ನ ಜಾದೂಗಾರ ತನ್ನ ಆಟಗಳನ್ನು ತೋರಿಸುತ್ತಿದ್ದ. ಜನರ ಕಣ್ಕಟ್ಟಿ ಅವರನ್ನು ತನ್ನ ಜಾದೂವಿನ ರಮ್ಯತೆಯಲ್ಲಿ ಸೆರೆ ಹಿಡಿಯುತ್ತಿದ್ದ. ಮತ್ತು ಅಧಿಕಾರಕ್ಕೆ ಬಂದ ನಂತರ ಒಂದೆರಡು ಜಾದೂಗಳನ್ನು ನಿಜವಾಗಿಸುತ್ತಿದ್ದ. ಮಿಕ್ಕಂತೆ ಗಾಳಿಯಿಂದ ರೂಪಾಯಿ